ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ : ಬಸವ ಕಲ್ಯಾಣ ತಾಲ್ಲೂಕುನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೆರೆಗಳನ್ನು ಮಾಡತಕ್ಕಂಥಾದ್ದಕ್ಕೆ acquire ಮಾಡಿಕೊಂಡಂಥ ಜಾಗಗಳ ದುಡ್ಡು ಇನ್ನೂ ರೈತರಿಗೆ ಮುಟ್ಟಿಲ್ಲ. ಆ ದುಡ್ಡನ್ನು ಯಾವಾಗ ಮುಟ್ಟಿಸುತ್ತಾರೆ ಎನ್ನುವುದನ್ನು ಕ್ಲಿಯರ್ ಆಗಿ ಉಪ ಮುಖ್ಯಮಂತ್ರಿಗಳು ಹೇಳಬೇಕು. ಅದೇ ರೀತಿ, ಬಸವ ಕಲ್ಯಾಣದಲ್ಲಿ ಮನ್ನಳ್ಳಿ ಟ್ಯಾಂಕ್ sanctionಆಗಿ ಸುಮಾರು 2 ವರ್ಷಗಳಾಗಿದೆ. ಅದರ ಕಾಮಗಾರಿ ಇನ್ನೂ ಕೂಡ ಪ್ರಾರಂಭವಾಗಿಲ್ಲ. ಅದನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಎನ್ನುವುದನ್ನೂ ಹೇಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ : ನಿಮ್ಮ ಪ್ರಶ್ನೆಗೆ ನಾನು ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದೇನೆ. ತಾವು ಉಪ ಪ್ರಶ್ನೆಯನ್ನು ಕೇಳಿರುವಂಥಾದ್ದಕ್ಕೆ ನಾನು ಹೇಳುವುದೇನೆಂದರೆ, ನಾನು ಈಗಾಗಲೇ ಹೇಳಿದಂತೆ, ಆದ್ಯತೆ ಮೇಲೆ ಹಣವನ್ನು ಬಿಡುಗಡೆ ಮಾಡಿ ಕೆಲಸವನ್ನು ಪ್ರಾರಂಭ ಮಾಡುತ್ತೇನೆ. ಹೋದ ವರ್ಷದಿಂದ ಈ ವರ್ಷಕ್ಕೆ ಸ್ಪಿಲ್‌ಓವರ್ ವರ್ಕ್ಸ್ ಇದೆ. ಅದಕ್ಕೆ ಹಣವನ್ನು ಕೊಟ್ಟುತ್ತಿದ್ದೇವೆ. ಅದರ ಕಡೆ ನಾನು ಗಮನವನ್ನು ಕೊಡುತ್ತೇನೆ.

ಇ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಬಸವರಾಜ್ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖಾ ಸಚಿವರು): ಮಾನ್ಯ ಉಪಾಧ್ಯಕ್ಷರೆ, ದಿನಾಂಕ:23-07-2007 ರಂದು ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 11ನೇ ಪಟ್ಟಿಯಲ್ಲಿರುವ 93 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು: ಮಂಡಿಸಲಾಯಿತು.

(ಅನುಬಂಧ-1)

2) ಅಧ್ಯಕ್ಷರೆ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ : ಪೌರ ಕಾರ್ಮಿಕರು ಮುಷ್ಕರ ನಡೆಸುತ್ತಿರುವ ಬಗ್ಗೆ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಪೌರ ಕಾರ್ಮಿಕರ ಮುಷ್ಕರದ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ನಾವು ಅಧ್ಯಕ್ಷರ ಹತ್ತಿರ ಅನುಮತಿಯನ್ನು ಕೇಳಿದ್ದೆವು. ಪೌರ ಕಾರ್ಮಿಕರು ಒಂದು ವಾರದಿಂದ ಮುಷ್ಕರ ಮಾಡುತ್ತಿದ್ದಾರೆ. ಎಲ್ಲ ನಗರಗಳೂ ಗಬ್ಬೆದ್ದು ಹೋಗಿವೆ. ಅಲ್ಲಿ ಕಸ ಗುಡಿಸುವವರಿಲ್ಲ, ನೀರು ಬಿಡುವವರಿಲ್ಲ. ಆ ವಿಷಯವನ್ನು ಚರ್ಚೆ ಮಾಡಲಿಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕು. ಅವರು ಮುಷ್ಕರ ಹೂಡಿ ಒಂದು ವಾರವಾಯಿತು. ಒಂದು ವಾರದಿಂದ ಆ ಸಮಸ್ಯೆ ಪರಿಹಾರವಾಗಿಲ್ಲ. ನಮ್ಮ ನಗರಗಳೆಲ್ಲ ವಾಸನೆ ಹೊಡೆಯುತ್ತಿವೆ. ಮಂತ್ರಿಗಳು, ಸರ್ಕಾರ ಏನು ಮಾಡುತ್ತಿದೆ ಎಂದು ಗೊತ್ತಾಗುತ್ತಿಲ್ಲ. ಸಮಸ್ಯೆ ಪರಿಹಾರ ಮಾಡಿಲ್ಲ. ಅವರು ಮುಷ್ಕರವನ್ನು ಮುಂದುವರೆಸಿದ್ದಾರೆ. ಸರ್ಕಾರ ಅವರನ್ನು ಮಾತುಕತೆಗೆ ಕರೆಯುತ್ತಿಲ್ಲ. ಸರ್ಕಾರ